ಜ್ಞಾನ, ಸಂಸ್ಕಾರ ಪ್ರಸಾರದ ಮಹೋನ್ನತ ಸೇವೆ ಶ್ಲಾಘನೀಯ

ಮಹಾದೇವಪ್ಪ ಕಡೇಚೂರ್ ಕೃತಿ ವಿತರಣಾ ಅಭಿಯಾನಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಸ್ವಾತಂತ್ರ್ಯ ಹೋರಾಟಗಾರ ಸಾಹಿತಿ ಮಹಾದೇವಪ್ಪ ಕಡೇಚೂರು ಅವರ ಕೃತಿಗಳನ್ನು ವಿದ್ಯಾರ್ಥಿಗಳಿಗೆ ಹಂಚುವ ಕಾರ್ಯವಾಗಿದ್ದು ಹಿರಿಯರ ಚಿಂತನೆ ಹಾಗೂ ಸಂಸ್ಕಾರವನ್ನು ಪ್ರಸಾರ ಮಾಡುವ ಕಾರ್ಯ ಇದಾಗಿದೆ ಎಂದು ಕರ್ನಾಟಕ ಪುಸ್ತಕ ಪ್ರಾಧಿಕಾರದ ಸದಸ್ಯ ಬಿ.ಹೆಚ್ ನಿರಗುಡಿ ಹೇಳಿದರು.

ಕಲಬುರಗಿ-ಸೇಡಂ ರಸ್ತೆಯಲ್ಲಿರುವ ಆರ್ಯ ಈಡಿಗ ಸಮಾಜದ ಕಾಮರಾಜ್ ನಾಡಾರ್‌ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯಕ್ಕೆ ಶ್ರೀಮತಿ ಬಾಲಮ್ಮ ಮಹಾದೇವಪ್ಪ ಕಡೇಚೂರ್‌ಟ್ರಸ್ಟ್ ಮತಿಯಂದ ಮಹಾದೇವಪ್ಪ ಕಡಚೂರು ಅವರ ಕೃತಿಗಳ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಟ್ರಸ್ಟಿನ ಸದಸ್ಯ ಡಾ. ಸದಾನಂದ ಪೆರ್ಲ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿ ಈ ಅಭಿಯಾನ ಪ್ರತಿ ತಿಂಗಳು ನಡೆಯಲಿದ್ದು ಸರಕಾರಿ ಶಾಲಾ ಗ್ರಂಥಾಲಯಗಳಿಗೆ ಪುಸ್ತಕ ಹಸ್ತಾಂತರಿಸುವ ಯೋಜನೆ ಇಟ್ಟುಕೊಳ್ಳಲಾಗಿದೆ ಎಂದರು.

ನಾಡಾರ್‌ಶಿಕ್ಷಣ ಸಂಸ್ಥೆಯ ಅಧ್ಯಕ್ಷ ನರಸಯ್ಯ ಗುತ್ತೇದಾರ್, ಗುರುಗಳಾದ ರೇಣುಕಾ ಆಶೋಕ್ ಸಂಕಲಾಪುರ, ಕಾಮಧೇನು ಮಹಿಳಾ ಸಂಘದ ಕಾರ್ಯದರ್ಶಿ ಜ್ಯೋತಿ ರಾಜು ಗುತ್ತೇದಾರ್, ರಾಜೇಶ ಗುತ್ತೇದಾರ್, ಮಹೇಶ್ ಕಡೇಚೂರ್, ದಿನೇಶ್, ವನಿತಾ ಗುತ್ತೇದಾರ್, ಅಶೋಕ ಸಂಕಲಾಪುರ, ಮಲ್ಲಿಕಾರ್ಜುನ ಕುಕ್ಕುಂದಿ, ಡಾ. ವಿಜಯ್ ಕುಮಾರ ಘರೂತೆ, ರೇವಣಸಿದ್ದಪ್ಪ ದುಕಾನ,ಕಲಾವಿದ ಶಿವ ಕುಮಾರ್ ಇದ್ದರು.

ಕಾಲಮಿತಿಯೊಳಗೆ ಕಾಮಗಾರಿಯನ್ನು ಮುಗಿಸಲು ಅಧಿಕಾರಿಗಳಿಗೆ ಸೂಚನೆ

ಜೇವರ್ಗಿಯಲ್ಲಿ ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಹರವಾಳ ಜೆಸ್ಕಾಂ ಕಾಮಗಾರಿಗಳ ಪರಿಶೀಲನೆ ಸುಭೆ ನಡೆಸಿದರು

• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕಾಲ ಮಿತಿಯೊಳಗೆ ಕಾಮಗಾರಿ ಮುಗಿಸಿ ಜನತೆಗೆ ಸವಲತ್ತು ನೀಡಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ಅಧ್ಯಕ್ಷ ಪ್ರವೀಣ್ ಹರವಾಳ ಖಡಕ್ ಎಚ್ಚರಿಕೆ ನೀಡಿದರು.

ಜೆಸ್ಕಾಂ ಪ್ರಗತಿ ಪರಿಶೀಲನಾ ಸಭೆಗೂ ಮುನ್ನ ಜೇವರ್ಗಿ ತಾಲೂಕಿನ ವಿವಿಧ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ ಅವರು ಕಾಮಗಾರಿ ವಿಳಂಬ ಸಹಿಸಲಾಗದು ಎಂದಿದ್ದಾರೆ

ಪರಿಶೀಲನೆ ಹೊತ್ತಲ್ಲಿ ಜೇವರ್ಗಿ, ಸುತ್ತಮುತ್ತ ಸಾರ್ವಜನಿಕರಿಗೆ ಆಪಾಯ ಉಂಟುಮಾಡುವಂತಿದ್ದ ಹಾಗೂ ಶಿಥಿಲಾವಸ್ಥೆಯಲ್ಲಿದ್ದ ವಿದ್ಯುತ್ ಕಂಬಗಳನ್ನು ಗಮನಿಸಿ, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ತಕ್ಷಣವೇ ತೆರವುಗೊಳಿಸಿ ಹೊಸ ಕಂಬಗಳನ್ನು ಅಳವಡಿಸಲು ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಿದರು.

ಜೇವರ್ಗಿ ತಾಲೂಕಿನ ಕೂಡಿ ದರ್ಗಾದಲ್ಲಿರುವ 33/11 ಕೆ.ವಿ ವಿದ್ಯುತ್ ಉಪಕೇಂದ್ರಕ್ಕೆಭೇಟ ನೀಡಿ, ಅಲ್ಲಿನ ವಿದ್ಯುತ್ ಸರಬರಾಜು ವ್ಯವಸ್ಥೆ, ನಿಯಂತ್ರಣ ಕೊಠಡಿ ಹಾಗೂ ತಾಂತ್ರಿಕ ಕಾರ್ಯವೈಖರಿಯನ್ನು ಪ್ರತ್ಯಕ್ಷವಾಗಿ ವೀಕ್ಷಿಸಿ ಅಧ್ಯಕ್ಷರು ಪರಿಶೀಲಿಸಿದರು.

ನಂತರ ಜೇವರ್ಗಿಯ ತಾಲೂಕು ಆಡಳಿತ ಕಚೇರಿಯಲ್ಲಿ ಜೆಸ್ಕಾಂ ಮತ್ತು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳ ಮುಖ್ಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಚಾಲ್ತಿಯಲ್ಲಿರುವ ಪ್ರತಿಯೊಂದು ಕಾಮಗಾರಿಯ ಪ್ರಗತಿಯನ್ನು ಪರಾಮರ್ಶಿಸಿದರು.

ನಿಗದಿತ ಕಾಲಮಿತಿಯೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಎಚ್ಚರಿಸಲಾಯಿತು. ಮುಖ್ಯಮಂತ್ರಿಗಳ ಆದೇಶದಂತೆ ಪ್ರತಿಯೊಬ್ಬ ಫಲಾನುಭವಿಯ ಮನೆಗೂ ಭೇಟಿ ನೀಡಿ 'ಗೃಹ ಜ್ಯೋತಿ' ಯೋಜನೆಯ ಪರಿಶೀಲನೆ ನಡೆಸಲು, ಸಾರ್ವಜನಿಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಸಲು ಸೂಚನೆ ನೀಡಿದರು.

ಬಾಕಿ ವಿದ್ಯುತ್ ಬಿಲ್ ಪಾವತಿಸದ ಸಂಪರ್ಕಗಳನ್ನು ಯಾವುದೇ ದಾಕ್ಷಿಣ್ಯವಿಲ್ಲದೆ ತಕ್ಷಣವೇ ವಿದ್ಯುತ್ ಕಡಿತಗೊಳಿಸಲು, ಅಕ್ರಮ ವಿದ್ಯುತ್ ಸಂಪರ್ಕಗಳಿಗೆ ತಡೆ ನೀಡಿ ಟ್ರಾನ್ಸ್‌ಫಾರ್ಮರ್‌ಗಳ ವೈಫಲ್ಯವನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಅಧ್ಯಕ್ಷ ಹರವಾಳ

ಓವರ್‌ಲೋಡ್ ಟಿಪ್ಪರ್‌ಗಳಿಂದ ಬೈಕ್ ಸವಾರರಿಗೆ ನಿತ್ಯ ತಪ್ಪದ ಪರದಾಟ

ಹಾಡಹಗಲೇ ರಾಜಾರೋಷದಿಂದ ಸಾಗಿದ್ದರೂ ಅಧಿಕಾರಿಗಳ ಮೌನ

• **ಕನ್ನಡಪ್ರಭ ವಾರ್ತೆ** ಕಮಲಾಪುರ

ರಾಷ್ಟ್ರೀಯ ಹೆದ್ದಾರಿ ಮೇಲೆ ರೇತಿ ಓವರ್‌ಲೋಡ್ ಟಿಪ್ಪರ್.

ಓವರ್‌ಲೋಡ್ ಟಿಪ್ಪರ್‌ಲಾರಿಗಳಿಂದ ಸಾರ್ವಜನಿಕರಿಗೆ ಹಾಗೂಬೈಕ್‌ಸವಾರರಿಗೆನಿರಂತರತೊಂದರೆಯಾಗುತ್ತಿದ್ದರೂ ಆಶ್ಚರ್ಯ ಎನಿಸಿದರು ಇದು ಸತ್ಯ ಮಹಾಗಾಂವ ಕ್ರಾಸ್ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ಮೇಲೆ ಓವರ್‌ಲೋಡ್ ಟಿಪ್ಪರ್‌ಲಾರಿಗಳ ನಿತ್ಯ ಹಾಡು ಹೋಗಲೇ ರಾಜಾರೋಷವಾಗಿ ಎಗ್ಗಿಲ್ಲದೆ ಸಾಗುತ್ತಿವೆ ಸ್ಥಳೀಯ ಮಹಾಗಾಂವ ಪೋಲಿಸರು ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದಾರೆ.

ನಿಯಮ ಉಲ್ಲಂಘಿಸಿ ಮರಳು, ಮತ್ತು ಜಲ್ಲಿಕಲ್ಲು, ರೇತಿ ಸಾಗಿಸುತ್ತಿರುವ ಈ ವಾಹನಗಳಿಂದಾಗಿ ರಸ್ತೆಗಳು ಹಾಳಾಗುತ್ತಿದ್ದು, ಅಪಘಾತಗಳ ಭೀತಿ ಹೆಚ್ಚಾಗಿದೆ.

ಓವರ್‌ಲೋಡ್ ಲಾರಿಗಳ ಹಾವಳಿಯಿಂದ ಅಪಘಾತಗಳ ಆತಂಕ: ಮಿತಿಮೀರಿದ ಭಾರವನ್ನು ಹೊತ್ತು ಅತಿ ವೇಗವಾಗಿ ಚಲಿಸುವ ಟಿಪ್ಪರ್‌ಗಳು ಸವಾರರ ಪ್ರಾಣಕ್ಕೆ ಕುತ್ತಾಗಿ ಪರಿಣಮಿಸಿವೆ. ಲಾರಿಗಳ ತೂಕವನ್ನು ಕಡೆಯಲಾರದೆ ರಸ್ತೆಗಳು ಗುಂಡಿ ಬಿದ್ದು ಹಾಳಾಗುತ್ತಿವೆ. ಇದರಿಂದ ದ್ವಿಚಕ್ರ ವಾಹನ ಸವಾರರು ಮತ್ತು ಪಾದಚಾರಿಗಳು ಪರದಾಡುವಂತಾಗಿದೆ.ಟಾರ್ಪಲ್ ಇಲ್ಲದೆ ಸಾಗಿಸುವ ಜಲ್ಲಿಕಲ್ಲು ಮತ್ತು ಮರಳಿನಿಂದ ದೂಳುಮಯ ವಾತಾವರಣ ಸೃಷ್ಟಿಯಾಗುತ್ತಿದೆ. ಹೆದ್ದಾರಿ ಮೇಲೆ ಈ ರೇತಿ ವಾಹನಗಳಿಗೆ ಯಾವುದೇ ಭಯವಿಲ್ಲದೆ ರಾಜಾರೋಷವಾಗಿ ಪರವಸಿಗೆ ಪಡೆಯದೆ ಕಂಡರೂ ಕಾಣದಂತೆ ಮಹಾಗಾಂವ ಪೊಲೀಸರು ಮೌನಕ್ಕೆ ಶರಣಾಗಿದ್ದಾರೆ. ಆದರೆ ಇದು ರಾಷ್ಟ್ರೀಯ ಹೆದ್ದಾರಿಯಾಗಿದ್ದು ನಿತ್ಯ ಸಾವಿರಾರು ವಾಹನಗಳು ಬೈಕ್ ಸವಾರರು ಚಲಿಸುವ ರಸ್ತೆಯಾಗಿದ್ದು ಇದರಿಂದ ಅಪಘಾತ ಸಂಖ್ಯೆ ಹೆಚ್ಚಾಗುತ್ತಿದೆ ಇಷ್ಟಾದರೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪೊಲೀಸರು ಸಿಪಿಐ, ಪಿಎಸ್‌ಐ ನಿತ್ಯ ಇದೇ ರಸ್ತೆ ಮೂಲಕ ಸಂಚಾರಿಸುತ್ತಾರೆ.

ಪೊಲೀಸರ ನಿರ್ಲಕ್ಷ ಹಾಗೂ ಲಾರಿ ಮಾಲೀಕರ ಹತ್ತಿರ ಪ್ರತಿ ತಿಂಗಳು ತಿಂಗಳು ಹಫ್ತಾ ವಸೂಲಿ ಮಾಡಿಕೊಂಡು ಪೊಲೀಸರಿಗೆ ಹೊಂದಾಣಿಕೆ ಹಾಗೂ ರಾಜಕೀಯ ಪ್ರಭಾವದಿಂದ ಮತ್ತು ಸ್ಥಳೀಯ ಪೊಲೀಸರು ಕಠಿಣ ಕ್ರಮ ಕೈಗೊಳ್ಳದೆ ನಿರ್ಲಕ್ಷ ವಹಿಸುತ್ತಿದ್ದಾರೆ.ಮೌನಕ್ಕೆ ಶರಣಾಗಿದ್ದಾರೆ.ಈ ರೀತಿಯ ಅಕ್ರಮ ಸಾಗಾಟ ಮತ್ತು ನಿರ್ಲಕ್ಷ್ಯದ ಬಗ್ಗೆ ಸಂಬಂಧಪಟ್ಟ ಇಲಾಖೆ ಮೇಲಧಿಕಾರಿಗಳು ಮತ್ತೆ ಮಧ್ಯಪ್ರವೇಶಿಸಿ ಕೂಡಲೇ ಕ್ರಮ ಕೈಗೊಂಡು ಹೆದ್ದಾರಿ ಮೇಲೆ ಆಗುತ್ತಿರುವ ಅಪಘಾತಗಳು ತಡೆಗಟ್ಟಬೇಕು. ಸ್ಥಳೀಯ ಪೊಲೀಸರ ಠಾಣೆಗೆ ಬರುವ ಎಲ್ಲಾ ಜನಸಾಮಾನ್ಯರ ಹತ್ತಿರ ಹಣ ವಸುಲಿ ಮಾಡುವ ದಂಧೆಗೆ ಇಳಿದಿದ್ದಾರೆ.

• **ಅಂಬರಾಯ ದಸ್ತಾಪುರ** ಬಹುಜನ ಸಮಾಜ ಪಕ್ಷ ಗ್ರಾಮೀಣ ಅಧ್ಯಕ್ಷ ಕಲಬುರ್ಗಿ

ಪ್ರವಾಸಿಗರ ಸೆಳೆಯುವ ಬಕ್ಕ ಪ್ರಭು ದೇಗುಲ

ಸುತ್ತಮುತ್ತಲು ವಿವಿಧ ಜಾತಿಯ ಕಾಡುಪ್ರಾಣಿಗಳು ಅಲ್ಲದೆ ಹಕ್ಕಿಗಳು ಕಾಣುತ್ತಿವೆ. ಪ್ರವಾಸಿಗರು ಇಲ್ಲಿಗೆ ಹೆಚ್ಚಾಗಿ ಪ್ರತಿ ಶನಿವಾರ, ಭಾನುವಾರ ಆಗಮಿಸುತ್ತಿದ್ದಾರೆ. ಪ್ರವಾಸಿಗರಾದ ಶ್ರೀಮಂತ ಕಟ್ಟಿಮನಿ, ಚಂದ್ರ ಶೆಟ್ಟಿ ಜಾದವ್ ಹಣಮಂತ ಪೂಜಾರಿ ಇಲ್ಲಿನ ಸುಂದರವಾದ ಅರಣ್ಯ ಪ್ರದೇಶವು ಮನಸ್ಸಿಗೆ ಬಹಳ ಆನಂದ ಕೊಡುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಚಿಂಚೋಳಿ: ತಾಲೂಕಿನ ಕುಂಚಾವರಂ ವನ್ಯಜೀವಿಧಾಮ ಅರಣ್ಯ ಪ್ರದೇಶದಲ್ಲಿ ಸತತವಾಗಿ ನಾಲ್ಕು ದಿನಗಳಿಂದ ಸಾಧಾರಣದಲ್ಲಿ ಮಳೆಯಾಗುತ್ತಿದ್ದು ಅರಣ್ಯ ಪ್ರದೇಶವು ಹಸಿರಿನಿಂದ ಕಂಗೊಳಿಸುತ್ತಿದ್ದು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ತಾಲೂಕಿನ ಗೊಟ್ಟಂಗೊಟ್ಟ ಐತಿಹಾಸಿಕ ಬಕ್ಕಪ್ರಭು ದೇವಸ್ಥಾನ ಪ್ರದೇಶವು ಗಿಡಮರಗಳ ಹಚ್ಚರಿನ ಎಲೆಗಳಿಂದ ಕಂಗೊಳಿಸಿದ್ದು ಪ್ರವಾಸಿಗರು ಮತ್ತು ಭಕ್ತಾದಿಗಳ ಹೆಚ್ಚಾಗಿ ಇಲ್ಲಿ ಆಗಮಿಸುತ್ತಿದ್ದಾರೆ. ತಾಲೂಕಿನ ಚಂದ್ರಂಪಳ್ಳಿ ಪ್ರವಾಸಿ ತಾಣದ ಮೇಲ್ಭಾಗದಲ್ಲಿರುವ ಗೊಟ್ಟಂಗೊಟ್ಟ ಭಕ್ಕ ಪ್ರಭು ತಪಸ್ಸು ಮಾಡಿದ ಪವಿತ್ರಾಸಿಕ ಧಾರ್ಮಿಕ ಕ್ಷೇತ್ರವು ಇದಾಗಿದ್ದು ಅಲ್ಲದೆ ಭೀಮ ದುರ್ಯೋಧನ ಕುಸ್ತಿ ಕಾಳಗ ಮಾಡಿದ ಐತಿಹ್ಯವಿದೆ. ಶ್ರೀರಾಮನು ವನವಾಸಕ್ಕೆ ಹೋಗುವ ಸಂದರ್ಭದಲ್ಲಿ ಇಲ್ಲಿನ ಬಕ್ಕಪ್ರಭು ದೇವಸ್ಥಾನದಲ್ಲಿ ವಿಶ್ರಾಂತಿ ಪಡೆದಂತಹ ಐತಿಹಾಸಿಕ ಸ್ಥಳ ಇದಾಗಿದೆ.

ಚಂದ್ರಂಪಳ್ಳಿ ಜಲಾಶಯ ಮತ್ತು ಭಕ್ಕ ಪ್ರಭು ದೇವಸ್ಥಾನ

ಮನುಷ್ಯತ್ವ ಮೆರೆದ ಜೇವರ್ಗಿ ಶಾಸಕ ಡಾ. ಅಜಯ್

ರಸ್ತೆ ಬದಿ ನರಳುತ್ತಿದ್ದ ವ್ಯಕ್ತಿ ರಕ್ಷಣೆ | ಧರ್ಮಸಿಂಗ್ 9ನೇ ಪುಣ್ಯಸ್ಮರಣೆ ಪೂಜೆಗೆ ತೆರಳುತ್ತಿದ್ದಾಗ ಮಾನವೀಯತೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ರಾಜಕೀಯ, ಅಧಿಕಾರ ಹಾಗೂ ಕಾರ್ಯಕ್ರಮಗಳ ಆಚರಕ್ಕಿಂತ ಮನುಷ್ಯತ್ವವೇ ದೊಡ್ಡದು ಎಂಬುದನ್ನು ಜೇವರ್ಗಿ ಕ್ಷೇತ್ರದ ಶಾಸಕ ಡಾ. ಅಜಯ್ ಸಿಂಗ್ ಅವರು ಇಂದು ತೋರಿಸಿಕೊಟ್ಟರು ರಸ್ತೆ ಬದಿಯಲ್ಲಿ ಅಸ್ವಸ್ಥಗೊಂಡು ನರಳುತ್ತಿದ್ದ ವ್ಯಕ್ತಿಯೊಬ್ಬರನ್ನು ತಮ್ಮದೇ ಸ್ವಂತ ಕಾರಿನಲ್ಲಿ ಆಸ್ಪತ್ರೆಗೆ ದಾಖಲಿಸಿವ ಮೂಲಕ ಶಾಸಕರು ಸಮಯಪ್ರಜ್ಞೆ ಹಾಗೂ ಮಾನವೀಯತೆ ಮೆರೆದಿದ್ದಾರೆ.

ಘಟನೆಯ ವಿವರ: ಮಾಜಿ ಮುಖ್ಯಮಂತ್ರಿಗಳಾದ ದಿವಂಗತಧರ್ಮಸಿಂಗ್ ಅವರ9ನೇವರ್ಷದಪುಣ್ಯಸ್ಮರಣೆ ನಿಮಿತ್ತ ಅವರ ಕುಟುಂಬದವರು ಮತ್ತು ಆಪ್ತರು ಧರ್ಮಸಿಂಗ್ ಅವರ ಹುಟ್ಟೂರಾದ ನೆಲೋಗಿ ಹಾಗೂ ಜೇವರ್ಗಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ವಿವಿಧ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದರು.

ಈ ವೇಳೆ ಕಲಬುರಗಿ-ಜೇವರ್ಗಿ ಮಾರ್ಗಮಧ್ಯೆ ರಸ್ತೆ ಬದಿಯಲ್ಲಿ ವ್ಯಕ್ತಿಯೊಬ್ಬರು ಗಾಯಗೊಂಡು ಅಸ್ವಸ್ಥರಾಗಿ ನರಳುತ್ತಿರುವುದು ಶಾಸಕರ ಗಮನಕ್ಕೆ ಬಂದಿದೆ.

ಕೂಡಲೇ ತಮ್ಮ ವಾಹನವನ್ನು ತಡೆದು ಕೆಳಗಿಳಿದ ಶಾಸಕ ಡಾ. ಅಜಯ್ ಸಿಂಗ್ ಅವರು, ಸ್ವತಃ ವೈದ್ಯರಾಗಿದ್ದರಿಂದ ಯಾವುದೇ ಗಡಿಬಿಡಿಗೆ ಒಳಗಾಗದೆ ಗಾಯಾಳಿಗೆ ಧೈರ್ಯತುಂಬಿ ಪ್ರಾಥಮಿಕ ಶುಶ್ರೂಷೆ ಒದಗಿಸಿದರು. ಬಳಿಕ ತಡಮಾಡದೆ ತಮ್ಮದೇ ಕಾರಿನಲ್ಲಿ ತಮ್ಮ ಆಪ್ತ ಸಹಾಯಕರೊಂದಿಗೆ ಜಿಮ್ಸ್ ಆಸ್ಪತ್ರೆಗೆ ಸಾಗಿಸಿ ಸೂಕ್ತ ಚಿಕಿತ್ಸೆ ಸಿಗುವಂತೆ ವ್ಯವಸ್ಥೆ ಮಾಡಿದರು.

ಬಸವಪಟ್ಟಣದನಿವೃತ್ತಕೆಕೆಆರ್‌ಟಿಸಿನೌಕರ: ಅಪಘಾತದಲ್ಲಿ ಗಾಯಗೊಂಡು ರಸ್ತೆ ಬದಿಯಲ್ಲಿ ಬಿದ್ದಿದ್ದ ವ್ಯಕ್ತಿಯನ್ನು ಕಲಬುರಗಿ ತಾಲ್ಲೂಕಿನ ಬಸವಪಟ್ಟಣ ಗ್ರಾಮದ ನಿವೃತ್ತ ಕೆಕೆಆರ್‌ಟಿಸಿ ನೌಕರರಾದ ಶರಣಪ್ಪ ಎಂದು ಗುರುತಿಸಲಾಗಿದೆ.

ಇವರು ತಮ್ಮ ಗ್ರಾಮದಿಂದ ಗುಲ್ಬರ್ಗಾ-ವಿಜಾಪುರ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ವಿಜಾಪುರಕ್ಕೆ ತೆರಳುತ್ತಿದ್ದ ವೇಳೆ ಪ್ರಜ್ಞೆ ತಪ್ಪಿ ಬಿದಿರುವುದಾಗಿ ತಿಳಿದುಬಂದಿದೆ.

ಪುಣ್ಯಸ್ಮರಣೆಯಂತಹ ಪ್ರಮುಖ ಕಾರ್ಯಕ್ರಮದ ಆತುರದಲ್ಲಿದ್ದರೂ, ಎಲ್ಲವನ್ನೂ ಬದಿಗೊತ್ತಿ ಗಾಯಾಳುವಿನ ಪ್ರಾಣ ರಕ್ಷಣೆಗೆ ಸ್ಪಂದಿಸಿದ ಶಾಸಕರ ಈ ಕರುಣೆ ಮತ್ತು ಸಮಯಪ್ರಜ್ಞೆ ಎಲ್ಲರ ಮನಗೆದ್ದಿದೆ.

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House,
P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅವಧಿಮೀರಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 17/08/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸೂಚಿಸಲಾಗಿದೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ಸೂಚನಾಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಭಾಗಶಃ ವಿಳಂಬವಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾದ ವಸ್ತುಗಳನ್ನು ಯಾವುದೇ ಹೊಣೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಆಧರಿಸಿ ಸರಾಸರಿ 3ರ ದಿನಗಳ IBJA ದರದ 85%, ಯಾವುದು ಹೆಚ್ಚೋ ಆದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪೆನಿಯ ವೆಬ್‌ಸೈಟ್‌ನಲ್ಲಿ ಪ್ರಚಾರ ಮಾಡಲಾಗುತ್ತದೆ. ತಳಗೆ ನೀಡಲಾದ ವಿವರಗಳು ಖಾತೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ (ಅಲ್ಲಿ) ಇವೂ ಹೊಸಪೇಟೆಯಲ್ಲಿ

ಆಭರಣಗಳ ವಿವರ :

ಗುಲ್ಬರ್ಗ, ಕೋಡಮ್, 0122790370005162, ಮಲ್ಲಿಕಾರ್ಜುನ, 11200/-, ಪ್ಲಾಸ್ಟ್ 1, 6357, ಭೀಮಾಶಂಕರ, 12000/-, ಕಂ-ಪ್ಲಾಸ್ಟ್ 1, 6750, ಜೊಲ್ಲೆ ಚಿನ್ನಾಮಿಯ, 49994/-, ಜ್ಞಿಸ್ 1, 7024, ಮೀರಾಸಾಬ್ ಮುಲ್ಲಾ, 26800/-, ರಾಕೇಶ್ 1,ಉ-ಪ್ಲಾಸ್ಟ್ 1, 7479, ರಿಜ್ವಾನ್ 70000/-, ನಸ್ ಜೀಲ್ 1,ಉ-ಪ್ಲಾಸ್ಟ್ 1, 7591, ಅಬ್ದುಲ್ ನುಬಿಜಾನ್, 13500/-, ಉ-ಪ್ಲಾಸ್ಟ್ 1, 7665, ಗೌರಿಬಾಯಿ, 11800/-, ಕಂ-ಪ್ಲಾಸ್ಟ್ 1, 7675, ಮಹೆಬೂಬ್, 23972/-, ನಸ್ ಜೀಲ್ 1, 7807, ರಾಮಜ್, 19999/-, ಉ-ಪ್ಲಾಸ್ಟ್ ಜ ಸ್ಟಡ್ 1, 7975, ಶಾಭಿಯಾ, 9999/-, ರಾಣಿಬಿ 1, 8062, ಕರಿ ಕುರಾರ್, 70000/-, ಫಿಂಗರ್ ರಿಂಗ್ಸ್ 1, 8127, ಅಸ್ಮಾ ಪರ್ವೀನ್, 13993/-, ಉ-ಪ್ಲಾಸ್ಟ್ 1, 8783, ಶಂಕರ್‌ಲಾಡ್, 90000/-, ಫಿಂಗರ್ ರಿಂಗ್ಸ್ 1, 8918, ರಾಕೇಶ್, 12999/-, ಜ್ಞಿಸ್ 1, 8982, ಸಜ್ಜಾ ಸಾಬಮ್ಮ, 69460/-, ಫಿಂಗರ್ ರಿಂಗ್ಸ್ 1, 9193, ಸ್ಪಷ್ಟ, 15000/-, ಕಂ-ಪ್ಲಾಸ್ಟ್ ಜ ಸ್ಟಡ್ 1, 9578, ಸಾವಿತ್ರಿ, 19000/-, ಉ-ಪ್ಲಾಸ್ಟ್ 1, 9593, ಈಮ್ಮಾ, 17000/-, ಫಿಂಗರ್ ರಿಂಗ್ಸ್ 1, 9930, ವಸೀಂ, 17000/-, ವಾಚ್ 1, 9964, ಶಾಶಾವಾಲಿ, 12989/-, ಸ್ಟಡ್ 1, 9986, ಜಲ್ತಾರ್, 9998/-, ಮೇಘ ಲೋನ್ 1, 0014, ಆಯಿಷಾ ಬಿ , 14000/-, ಸ್ಪಷ್ಟ 1, 0057, ಮೆಹಬೂಬ್ಸಾ 20800/-, ಫಿಂಗರ್ ರಿಂಗ್ಸ್ 1, 0059, ಪಂಕಜ್‌ಲಾಡ್, 17500/-, ಕಂ-ಪ್ಲಾಸ್ಟ್ 1, 0071, ಫಿರೋಜ್, 55001/-, ಫಿಂಗರ್ ರಿಂಗ್ಸ್ 1, 0076, ಮಹಾಂತ್, 45000/-, ಉ-ಪ್ಲಾಸ್ಟ್ 1, 0127, ಸಾಯಿನಾಥ್, 0122790370005308, ಮಾಣಿಕಪ್ಪ, 10700/-, ಚಾಕೆಲ್ 1, 0895, ಅಲಾವುದ್ದೀ, 17000/-, ಫಿಂಗರ್ ರಿಂಗ್ಸ್ 1, 0911, ಮಹಾಂತಪ್ಪ, 20705/-, ಫಿಂಗರ್ ರಿ